ಅಧ್ಯಕ್ಷರು : ಪುಟ್ಟಣ್ಣಯ್ಯನವರೇ ತಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ. ಎಲ್ಲಾ ಕಡೆಯಿಂದ ಮಾಹಿತಿ ತರಿಸಬೇಕು. ಆದಕಾರಣ ತಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ ಮುಂದೆ ತೆಗೆದುಕೊಳ್ಳೋಣ.

ಚಿತ್ರದುರ್ಗ ಜಿಲ್ಲೆಯಲ್ಲಿ ಅಂತರಜಲ ಹೆಚ್ಚಿಸುವುದು

147 - ಶ್ರೀ ಎಂ. ಚಂದ್ರಪ್ಪ (ಹರಮಸಾಗರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೆರೆಗಳು ಎಷ್ಟು 1995-96ನೇ ಸಾಲಿಗೆ ಎಷ್ಟು ಕೆರೆಗಳು ತುಂಬಿದ್ದವು?*

ಆ) *ಈ ಕೆರೆಗಳನ್ನು 1996-97ನೇ ಸಾಲಿನಿಂದ ತೂಬುಗಳನ್ನು ಮುಚ್ಚಿಸಿ ಅಂತರ ಜಲವನ್ನು ಹೆಚ್ಚಿಸುವ ಕಾರ್ಯಕ್ರಮವೇನಾದರೂ ಇದೆಯೇ, ಈ ಕಾರ್ಯಕ್ರಮದಿಂದ ಸುಮಾರು 300 ಅಡಿಯಿಂದ 400 ಅಡಿ ಕೊಳವೆ ಬಾವಿಗಳನ್ನು ಕೊರೆದರೂ ನೀರು ಬಾರದೆ ಇರುವುದರಿಂದ ಇಮ ಅವಶ್ಯಕತೆ ಎಂಬುವುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಕೆರೆಗಳ ತೂಬುಗಳನ್ನು ಮುಚ್ಚಿ ಕೆರೆ ತುಂಬಿ ಪಕ್ಷದಲ್ಲಿ ಕೋಡಿಗಳ ಮುಖಾಂತರ ನೀರು ಬಿಟ್ಟು ಉಳಿದ ನೀರು ಇಂಗುವುದರಿಂದ ಅಂತರ ಜಲ ಜಾಸ್ತಿಯಾಗುತ್ತದೆ ಎಂಬುದು ಸರ್ಕಾರಕ್ಕೆ ಗೊತ್ತಿದಿಯೇ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) :

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 367 ಕೆರೆಗಳು ಇವೆ. 1995-96ನೇ ಸಾಲಿನಲ್ಲಿ ಮಳೆಯ ಅಭಾವದಿಂದ ಯಾವ ಕೆರೆಗಳೂ ತುಂಬಿರುವುದಿಲ್ಲ.

ಆ) ಇಲ್ಲ, ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಚಿತ್ರದುರ್ಗ ಜಿಲ್ಲೆಯು ಬರಪೀಡಿತ ಪ್ರದೇಶವಾಗಿದ್ದು ಮಳೆ ಎಂದು ಕೆರೆ ತುಂಬಿದಲ್ಲಿ ಅಧಿಕೃತ ಅಚ್ಚುಕಟ್ಟಿಗೆ ನೀರು ಒದಗಿಸಬೇಕಾಗಿರುತ್ತದೆ. ಆದ ಕಾರಣ ತೂಬನ್ನು ಮುಚ್ಚಿ ನಿರು ಸಂಗ್ರಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಚಂದ್ರಪ್ಪ : ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕೆರೆಗಳು ಇವೆ? 1995-96ನೇ ಸಾಲಿನಲ್ಲಿ ಎಷ್ಟು ಕೆರೆಗಳು ತುಂಬಿರೆ ಎಂದು ಕೇಳಿದರೆ ಒಂದು ಕೆರೆಯೂ ತುಂಬಿಲ್ಲ ಎನ್ನುತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕೆಲವು ಭಾಗಗಳಲ್ಲಿ ಮಳೆ ಬಂದರೂ ಸಹ ಆ ಕೆರೆಗಳ ತೂಬುಗಳು ಸರಿ ಇಲ್ಲದೆ ಇರುವುದರಿಂದ ನೀರು ಬಂದರೂ ಸಹ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತಾಗಿದೆ. ಇದಕ್ಕೆ ಕಾರಣ ಆ ಕೆರೆಗಳು ಬಹಳ ವರ್ಷಗಳಿಂದ ದುರಸ್ತಿ ಕಾಣದೆ ಹಾಳಾಗಿ ನೀರು

ಬರದ ರೀತಿಯಲ್ಲಾಗಿವೆ. 1976-77ರಿಂದ ನನಗೆ ತಿಳಿದ ಮಟ್ಟಿಗೆ ಕೆರೆಗಳು ತುಂಬಿದೇ, ಮಳೆ ಕಡಿಮೆಯಾಗಿ ಅಲ್ಲಿಯ ಕೆರೆಗೆ ನೀರು ಬರದ ಪರಿಸ್ಥಿತಿ ಬಂದಿದೆ. ಸಾಧ್ಯವಾದಷ್ಟು ತೂಬುಗಳನ್ನು ಮುಚ್ಚಲಿಕ್ಕೆ ವ್ಯವಸ್ಥ ಮಾಡಿ, ಆ ವ್ಯವಸ್ಥ ಮಾಡಿದರೆ ಕೆರೆಯಲ್ಲಿ ನೀರನ್ನು ನಿಂತು, ನಮ್ಮ ಅಂತರ ಜಲ ಜಾಸ್ತಿಯಾಗಬಹುದು ಎನ್ನತಕ್ಕಂಥ ಮಾತನ್ನು ಹೇಳಿದ್ದ.

ಅಧ್ಯಕ್ಷರು : ಪ್ರಶ್ನೆಯನ್ನು ಕೇಳಿ ಭಾಷಣ ಬೇಡ.

ಶ್ರೀ ಎಂ. ಚಂದ್ರಪ್ಪ : ಸರ್ಕಾರದಿಂದ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಚೆಕ್ ಡ್ಯಾಮಗಳನ್ನು ಕಟ್ಟುತ್ತಿದ್ದಾರೆ. ಅದರ ಬದಲು ಈ ಕೆರೆಗಳನ್ನು ದುರಸ್ತಿ ಮಾಡಿದರೆ, ಬಂದಂಥ ನೀರು ಈ ಕೆರೆಗಳಲ್ಲಿ ಇಂಗುವುದರಿಂದ ನಮ್ಮ ಅಂತರ ಜಲ ಜಾಸ್ತಿಯಾಗುತ್ತದೆ. ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದರೆ ಸರಿಯಾದಂಥ ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಅವರ ಪ್ರಶ್ನೆ ಇಷ್ಟೆ. ಅಂಡರ್‌ಗ್ರೌಂಡ್ ವಾಟರ್ ಕಡಿಮೆಯಾಗುತ್ತಿದೆ, ಆದಕಾರಣ ಸಾಯಿಲ್ ಕನ್ಸರ್ವೇಶನ್ ಇಲಾಖೆಯವರು ಚೆಕ್ ಡ್ಯಾಮಗಳನ್ನು ಕಟ್ಟುತ್ತಿರುವುದು ಯೂಸಫುಲ್ ಆಗುತ್ತಿಲ್ಲ. ಕಡಿಮೆ ನೀರು ಇದ್ದಾಗ ನೀರು ಸ್ಲೂಯಿಸನ್ನು ಮುಂದ್ ಮಾಡಿ ಸ್ಟೋರೇಜ್ ಇಟ್ಟುಕೊಂಡು ಅಂಡರ್ ಗ್ರೌಂಡ್ ವಾಟರನ್ನು ರೀ ಚಾರ್ಜ್ ಮಾಡುವುದಕ್ಕೆ ಏನಾದರೂ ಒಂದು ವ್ಯವಸ್ಥ ಮಾಡುತ್ತಿರೋ ಎನ್ನತಕ್ಕಂಥದ್ದು ಒಂದು ಪ್ರಶ್ನೆ. He could not put it in a proper way.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ತಮಗೆಲ್ಲಾ ತಿಳಿದ ಹಾಗೆ ಚಿತ್ರದುರ್ಗ ಜಿಲ್ಲೆ ಬರಗಾಲ ಪೀಡಿತ ಪ್ರದೇಶ. ನಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ 367 ಕೆರೆಗಳು ಇವೆ. ಅದರ ಪೈಕಿ 196 ಕೆರೆಗಳನ್ನು ಜಿಲ್ಲಾಪಂಚಾಯತಗೆ ಹ್ಯಾಂಡ್ಓವರ್ ಮಾಡಿದ್ದೇವೆ. 69 ಕೆರೆಗಳು ದಾವಣಗೆರೆ ಜಿಲ್ಲಾಪಂಚಾಯತ್ ವ್ಯಾಪ್ತಿಗೆ ಬರುತ್ತಿವೆ. 1995-96ನೇ ಸಾಲಿನಲ್ಲಿ ಅಲ್ಲಿ ಮಳೆ ಬಂದಿಲ್ಲವೆಂದು ತಮಗೆಲ್ಲರಿಗೂ ಗೊತ್ತಿದೆ. ಆದಕಾರಣ ಅದು ಬರಗಾಲ ಪೀಡಿತ ಪ್ರದೇಶ. ಮಳೆ ಬರದ ಕಾರಣ ಆ ಕೆರೆಗಳಲ್ಲಿ ನೀರು ತುಂಬಲಿಲ್ಲ. ತೂಬುಗಳನ್ನು ಮುಚ್ಚಿ ಅಂತರ ಜಲವನ್ನು ಹೆಚ್ಚಿಸುವ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ತೂಬುಗಳನ್ನು ಒದಗಿಸತಕ್ಕಂಥದ್ದು. ಮಳೆ ಬರಲಿಲ್ಲ ಯಾವ ಕೆರೆಯೂ ತುಂಬಲಿಲ್ಲ. ಚಿತ್ರದುರ್ಗ ಜಿಲ್ಲೆ ಬರಗಾಲ ಎಂದು ತಮಗೆಲ್ಲರಿಗೂ ಗೊತ್ತಿದೆ. ಮಳೆ ಬಂದು ಕೆರೆಯಲ್ಲಿ ನೀರು ತುಂಬಿದಲ್ಲಿ ಅಚ್ಚುಕಟ್ಟುದಾರರಿಗೆ ಪೂರ್ಣ ಪ್ರಮಾಣವಾದ ನೀರನ್ನು ಒದಗಿಸಬೇಕಾಗುತ್ತದೆ. ಆದಕಾರಣ ತೂಬುಗಳನ್ನು ಮುಚ್ಚಿಸುವ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ ಎಂದು ನನ್ನ ಉತ್ತರ.

ಶ್ರೀ ಎಂ. ಚಂದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನೀರು ಬಂದು, ಕೇವಲ ಎರಡು ಮೂರು ದಿನಗಳಲ್ಲಿ ಹೊರಗಡೆ ಹೋಗುತ್ತದೆ. ಆದಕಾರಣ ಕಟ್ಟಿರುವಂಥ ತೂಬುಗಳನ್ನಾದರೂ ದುರಸ್ತಿ ಮಾಡಿದರೆ,

ಸಾಧ್ಯವಾದಷ್ಟು ಜನರಿಗೆ ಅನುಕೂಲವಾಗುತ್ತದೆ, ನೀರಾವರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಬಂದಿರತಕ್ಕಂಥ ನೀರನ್ನು ಲೋಪ ಆಗದಹಾಗೆ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರರಿಗೆ ಬಡ್ತಿಯಲ್ಲಿ 5 ಪರ್ಸೆಂಟ್ ಮೀಸಲಾತಿ.

149 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರದ ಅಂಗವಿಕಲ ನೌಕರರಿಗೆ ಶೇಕಡಾ 5 ರಷ್ಟು ಮುಂಬಡ್ತಿ ನೀಡಲು ಮೀಸಲಾತಿ ಇರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಸದರಿ ಅವಕಾಶವನ್ನು ರಾಜ್ಯ ಸರ್ಕಾರದ ಅಂಗವಿಕಲ ನೌಕರಿಗೂ ನೀಡಲು ನಿಯಮಗಳಲ್ಲಿ ತಿದ್ದುಪಡಿ ಮಾಡಿ ಜಾರಿಗೆ ತರಲು ಸರ್ಕಾರ ಕ್ರಮಕೈಗೊಳ್ಳುವುದೇ.

ಇ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಶಿವರಾಮು : ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಇಲ್ಲ, ಉದ್ಭವಿಸುವುದಿಲ್ಲ ಎಂದು ಕೊಟ್ಟಿದ್ದಾರೆ. ಇಲ್ಲಿ ಸಪ್ಲಿಮೆಂಟರಿಗೆ ಅವಕಾಶವೇ ಇದ್ದ ಹಾಗೆ ಇಲ್ಲ. ಆದರೆ ಒಂದು ವಿಚಾರ ಕೇಂದ್ರ ಸರ್ಕಾರದಲ್ಲಿ ಮೀಸಲಾತಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಆದರೆ ಒಂದು ಸುತ್ತೋಲೆ ಪ್ರಕಾರ ಅವಕಾಶ ಇದೆ ಎನ್ನುವ ಒಂದು ಆಜ್ಞಾಪತ್ರ ಇಲ್ಲಿದೆ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಎರಡನೆಯದು ಅದು ಇದೆಯೋ ಇಲ್ಲವೋ, ಇಲ್ಲದಿದ್ದರೂ ಅಂಗವಿಕಲರಿಗೆ ಯಾವ ಯಾವ ಹುದ್ದೆಯನ್ನು ಬಡ್ತಿ ಮೂಲಕ ಒದಗಿಸಿದೆ ಅವರಿಗೆ ಅದು ನಿರ್ವಹಣೆ ಮಾಡಲಿಕ್ಕೆ ಶಕ್ತಿ ಇದೆ ಎನ್ನತಕ್ಕಂಥವರಿಗೆ ನಾವು ಅವಕಾಶವನ್ನು ಕಲ್ಪಿಸಿಕೊಟ್ಟರೆ ಏನು ತೊಂದರೆಯಾಗುತ್ತದೆ ಎಂದು ನಾನು ಸರ್ಕಾರವನ್ನು ಕೇಳಲಿಕ್ಕೆ ಇಚ್ಛಿಸಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ